**ಸಾಕ್ಷಿಯನ್ನು ಈ ದಿನ ದಿಃ 18.05.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

1. ದಿಃ 30.03.2021 ರಂದು ಈ ಪ್ರಕರಣದ ಕಡತವನ್ನು ಚಾ.ಸಾ. 42 ರವರಿಂದ ಸಂಜೆ 04.30 ಕ್ಕೆ ಪಡೆದಿರುತ್ತೇನೆ. ಆ ದಿನ ನಾನು ಮೈಸೂರಿನ ಉದಯಗಿರಿ ಪೋಲೀಸ್ ಇನ್ಸ್ ಪೆಕ್ಟರ್ ಆಗಿ ಪ್ರಭಾರವನ್ನು ಮಧ್ಯಾಹ್ನ 12.30 ರ ಸಮಯಕ್ಕೆ ವಹಿಸಿಕೊಂಡಿರುತ್ತೇನೆ. ಕಡತವನ್ನು ಸುಮಾರು ಎರಡು ಗಂಟೆಗಳ ಕಾಲ ಪರಿಶೀಲಿಸಿರುತ್ತೇನೆ. ನನ್ನ ಹಿಂದಿನ ತನಿಖಾಧಿಕಾರಿಯವರು ಕಾನೂನು ರೀತಿಯ ತನಿಖೆಯನ್ನು ಮಾಡಿರುತ್ತಾರೆ ಎನ್ನುವುದನ್ನು ಕಂಡು ಕೊಂಡೆ. ಪಂಚ ಸಾಕ್ಷಿದಾರರಿಗೆ ನೋಟೀಸನ್ನು ಕೊಡಬೇಕು ಎಂದು ನಿಯಮವಿದೆ ಎನ್ನುವುದು ಸರಿ. ಶವ ಮಹಜರ್ ಕಾಲಕ್ಕೆ ಸದರಿ ಪಂಚರಿಗೆ ನೋಟೀಸನ್ನು ಚಾ,ಸಾ. 42 ರವರು ನೀಡಿದ್ದರು.

2. ಅಮಾನತ್ತು ಪಡಿಸಿಕೊಂಡಿದ್ದ ಪರಿಕರಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಡುವ ಮುನ್ನ **Invoice** ತಯಾರಿಸಬೇಕು ಎನ್ನುವುದು ಗೊತ್ತು. ನಾನು ಸದರಿ **Invoice** ನ್ನು ತಯಾರಿಸಿರುತ್ತೇನೆ. ಸಾಮಾನ್ಯವಾಗಿ ಸದರಿ **Invoice** ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಿಲ್ಲ. ಆದರೆ ಈಗ ಹಾಜರುಪಡಿಸಬಲ್ಲೆ. ತನಿಖೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ಕಡತದಲ್ಲಿ ಇರುತ್ತವೆ ಎನ್ನುವುದು ಸರಿ. ಆ ಕಡತದ ಪ್ರತಿ ರೂಪ ದೋಷಾರೋಪಣೆ ಪಟ್ಟಿ ಆಗಿರುತ್ತದೆ ಎನ್ನುವುದು ಸರಿ .

3. ಗೋಪಾಲಗೌಡ ಆಸ್ಪತ್ರೆಗೆ ನಾನು ನೀಡಿದ್ದ **Requisition** ನಂತೆ ಆ ಆಸ್ಪತ್ರೆಯವರು ನೀಡಿದ ದಾಖಲಾತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆ ದಾಖಲಾತಿ ಸರಿ ಇರುತ್ತದೆ. (ಸದರಿ ದಾಖಲಾತಿಯನ್ನು ನಿಪಿ 39 ಎಂದು ಗುರುತುಪಡಿಸಿಕೊಳ್ಳಲಾಗಿದೆ).

4. ನನ್ನ ತನಿಖೆಯ ಪ್ರಕಾರ ಘಟನೆ ದಿಃ 07.03.2021 ರಂದು ನಡೆದಿರುತ್ತದೆ. ಗೋಪಾಲಗೌಡ ಆಸ್ಪತ್ರೆಯವರು ನೀಡಿದ ನಿಪಿ 39 ರಲ್ಲಿ ಕಣ್ತಪ್ಪಿನಿಂದ ದಿನಾಂಕ 08.03.2021 ಎಂದು ತಿಳಿಸಿರುತ್ತಾರೆ , ಅದು ದಿಃ 07.03.2021 ಎಂದಾಗಬೇಕಾಗಿತ್ತು. ಯಾವುದಾದರು ದಾಖಲಾತಿಯಲ್ಲಿ ಕಣ್ತಪ್ಪಿನಿಂದ, ಕೈ ತಪ್ಪಿನಿಂದ, ತಪ್ಪುಗಳು ಆಗಿದ್ದಲ್ಲಿ ಆ ಬಗ್ಗೆ ವಿವರಣೆಯನ್ನು ಪಡೆದುಕೊಳ್ಳಬೇಕಾಗುತ್ತದೆ ಎನ್ನುವುದು ಸರಿ. ನಿಪಿ 39 ರಲ್ಲಿ ಆಗಿರುವ ದಿನಾಂಕದ ತಪ್ಪು ನನ್ನ ಗಮನಕ್ಕೆ ಈ ಹಿಂದೆ ಬಂದಿರಲಿಲ್ಲ, ಆದ್ದರಿಂದ ಆ ಬಗ್ಗೆ ವಿವರಣೆಯನ್ನು ಪಡೆದುಕೊಳ್ಳಲಿಲ್ಲ.

5. ನನ್ನ ತನಿಖಾ ಕಾಲದಲ್ಲಿ ಆರ್ ಎಫ್ ಎಸ್ ಎಲ್ ಗೆ ಒಟ್ಟು 17 ಭಾಂಗಿಗಳನ್ನು ಕಳುಹಿಸಿಕೊಡಲಾಗಿತ್ತು. ನಮ್ಮ ಠಾಣಾ ಸಿಬ್ಬಂದಿ ತಿಮ್ಮಪ್ಪ ರವರ ಮೂಲಕ ಆರ್ ಎಫ್ ಎಸ್ ಎಲ್ ಗೆ 06.04.2021 ರಂದು ಒಟ್ಟು 8 ಭಾಂಗಿಗಳನ್ನು ಕಳುಹಿಸಿಕೂಡಲಾಗಿತ್ತು. ಸಿಬ್ಬಂದಿ ನವೀನ್ ರವರು , ಪಿಸಿ 118 ತಿಮ್ಮಪ್ಪ ರವರು ತೆಗೆದುಕೊಂಡು ಹೋಗಿ ಕೊಟ್ಟಿದ್ದ **VICERA** ವನ್ನು ತಂದು ಕೊಟ್ಟಿದ್ದರು. ನವೀನ್ ರವರು ಅದನ್ನು ಜೆ ಎಸ್ ಎಸ್ ಆಸ್ಪತ್ರೆಯ ವೈದ್ಯಾಧಿಕಾರಿಯವರಿಂದ ಪಡೆದು ತಂದಿದ್ದಳು. ನಿಪಿ 43 ಪಿ ಎಂ ವರದಿಯಲ್ಲಿ **VICERA** ವನ್ನು ಪಡೆದು ಸಿಬ್ಬಂದಿ ನವೀನ್ ಗೆ ನೀಡಿದ ಬಗ್ಗೆ ನಮೂದು ಇರುವುದಿಲ್ಲ ಎನ್ನುವುದು ಸರಿ. ಆ **VIC ERA** ವನ್ನು ಡಾಃ ಚಂದ್ರಕಾಂತ್ ರವರು ಸದರಿ ಮೃತ

ದೇಹದಿಂದ ತೆಗೆದಿರುವುದೇ ಇಲ್ಲ ಎನ್ನುವುದು ಸರಿಯಲ್ಲ. ಸದರಿ ವೈದ್ಯರು **VIC ERA** ವನ್ನು ತೆಗೆದು ಸಿಬ್ಬಂದಿ ನವೀನ್ ಗೆ ನೀಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ 43 ಪಿ ಎಂ ವರದಿಯಂತೆ , ಮೃತ ಫರ್ಮಾನ್ ಉರ್ ರೆಹೆಮಾನ್ ನ ದೇಹದ ಮೇಲೆ , **“Grey colored Jeans with blue border on sides with tag “Diseal” along with brown coloured fabric belt”** ಇದ್ದವು ಎಂದಿದೆ ಎನ್ನುವುದು ಸರಿ. ನಾನು ನಮ್ಮ ಪಿಸಿ ತಿಮ್ಮಪ್ಪ ರವರೊಂದಿಗೆ ಕಳುಹಿಸಿಕೊಟ್ಟ ಪರಿಕರಗಳು ಮೃತ ವ್ಯಕ್ತಿಗೆ ಸಂಬಂಧಪಟ್ಟ ಪರಿಕರಗಣಾಗಿದ್ದವು ಎನ್ನುವುದು ಸರಿ. ಹಿಂದಿನ ತನಿಖಾಧಿಕಾರಿಗಳು ಪರಿಕರವನ್ನು ಸೀಲು ಮಾಡಿದ್ದರಿಂದ, ಅದರಲ್ಲಿ ಬೆಲ್ಟ್ ಇದ್ದ ಬಗ್ಗೆ ನಾನು ನೋಡಿಲು ಸಾಧ್ಯವಾಗಿರಲಿಲ್ಲ. ಅಮಾನತ್ತು ಪಡಿಸಿಕೊಂಡ ವಸುತಗಳ ಪ್ಯಾಕೇಟ್ ಮೇಲೆ, ಒಳಗಿರವ ವಸ್ತುಗಳನ್ನು ನಮೂದಿಸಿರುತ್ತಾರೆ ಎನ್ನುವುದು ಸರಿ. ಸ್ವತ್ತು ಪಟ್ಟಿಯಲ್ಲಿ ಹಿಂದಿನ ತನಿಖಾಧಿಕಾರಿಗಳು ಬೆಲ್ಟ್ ನ್ನು ನಮೂದಿಸಿರುವುದಿಲ್ಲ. ನನ್ನ ಹಿಂದಿನ ತನಿಖಾಧಿಕಾರಿಯವರು ಮಾಡಿದ್ದ ತನಿಖೆ ಕಾನೂನು ರೀತಿಯಾ ಇರಲಿಲ್ಲ ಎನ್ನುವುದು ಸರಿಯಲ್ಲ. ನ್ಯಾಯಾಲಯದ ಮುಂದೆ ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಗಿರುವ **Jeans** ಪ್ಯಾಂಟ್ ನೊಂದಿಗೆ ಬೆಲ್ಟ್ ಸೇರಿಕೊಂಡಿರುತ್ತದೆ. ಅದನ್ನು ನ್ಯಾಯಾಲಯ ಮತ್ತು ಎರಡೂ ಕಡೆಯ ವಕೀಲರು ಪರಿಶೀಲಿಸಿರುತ್ತಾರೆ. ನಿಪಿ 43 ಪಿ ಎಂ ವರದಿಯಲ್ಲಿ ಬಟ್ಟೆಗಳ ಬಗ್ಗೆ ನಮೂದಿಸಿರುವ ಕ್ರಮ ಸಂಖ್ಯೆ 2 ರಲ್ಲಿ , **“Yellow powder stains were present over the inner side orf T-shirt”** ಎಂದಿದೆ ಎನ್ನುವುದು ಸರಿ . ಪಿ ಎಂ ನಡೆಸಿದ ವೈದ್ಯರಲ್ಲಿ , ಈ ಹದಿ ಪುಡಿಯ ಗುರುತುಗಳು ಹೇಗೆ ಆಗಿವೆ , ಆಗುತ್ತವೆ ಎನ್ನುವ ವಗ್ಗೆ

ಕೇಳಿರುವುದಿಲ್ಲ. ಆ ಹಳದಿ ಪುಡಿ , ಯಾವ ಪುಡಿ ಎಂದು ನನ್ನ ತನಿಖಾ ಕಾಲದಲ್ಲಿ ಕೇಳಿ ತಿಳಿದುಕೊಂಡಿರುವುದಿಲ್ಲ. ಮೃತನಿಗೆ ಸಂಬಂಧಪಟ್ಟವರು ಆ ಹಳದಿ ಪುಡಿ ಯಾವುದು ಎನ್ನುವ ಬಗ್ಗೆ ತಿಳಿಸಿರುವುದಿಲ್ಲ. ನನ್ನ ಹಿಂದಿನ ತನಿಖಾಧಿಕಾರಿಯವರು ಆರೋಪಿತರನ್ನು ಪತ್ತೆ ಹಚ್ಚಲು ಯಾರನ್ನು ನೇಮಿಸಿದ್ದರು ಎನ್ನುವುದನ್ನು ಅವರೇ ಹೇಳಬೇಕಾಗುತ್ತದೆ. ನಾನು ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಯ ನೇಮಕಾತಿಯನ್ನು ಲಿಖಿತವಾಗಿ ಮಾಡಿರುತ್ತೇನೆ. ಸದರಿ ಆದೇಶದ ಪ್ರತಿ ನ್ಯಾಯಾಲಯದ ಕಡತದಲ್ಲಿದೆ. ದಿಃ 22.10.2021 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಸದರಿ ಆದೇಶವನ್ನು ಮಾಡಿರುತ್ತೇನೆ. ಈ ಪ್ರಕರಣದಲ್ಲಿ ನೇಮಕವಾದ ಸಿಬ್ಬಂದಿಗಳು ದಿಃ 22.10.2021 ರ ಸಂಜೆ ಠಾಣೆಗ ಬಂದಿರುವುದಿಲ್ಲ. ಮರು ದಿನ ಅಂದರೆ 23.10.2021 ರಂದು ಸಿಬ್ಬಂದಿಗಳು ಆರೋಪಿತರೊಂದಿಗೆ ಠಾಣೆಗೆ ಬೆಳಿಗ್ಗೆ 06.30 ಕ್ಕೆ ಹಾಜರಾಗಿದ್ದು. ಅವರು ನೀಡಿದ ವರದಿಯಲ್ಲಿ ಆರೋಪಿಗಳನ್ನು ಹಿಡಿಯಲು ಸಹಕರಿಸಿದ ಸಿಬ್ಬಂದಿಗಳ ಹೆಸರುಗಳನ್ನು ಸಹ ಉಲ್ಲೇಖಿಸಿರುತ್ತಾರೆ. ಆ ನಿಯೋಜಿತ ಸಿಬ್ಬಂದಿಗಳು ದಿಃ 22.10.2021 ರ ಬೆಳಿಗ್ಗ 09.00 ಗಂಟೆಯಿಂದ 23.10.2021 ರ ಬೆಳಿಗ್ಗೆ 06.30 ರವರೆಗೆ ಠಾಣೆಯಲ್ಲಿ ಇರಲಿಲ್ಲ ಎನ್ನುವುದು ಸರಿ . ಆ ರೀತಿ ನೇಮಕವಾದ ಸಿಬ್ಬಂದಿಗಳಿಗೆ ಆರೋಪಿತರ ಭಾವಚಿತ್ರವನ್ನಾಗಲೀ ಅಥವಾ ರೇಃಖಾ ಚಿತ್ರವನ್ನಾಗಲೀ ಕೋಟ್ಟಿರಲಲ್ಲ. ಮುಸ್ಲಿಂ ಸಮುದಾಯದಲ್ಲಿ ಆರೋಪಿಗಳ ಹೆಸರಿನವರೇ ಅನೇಕರು ಇರುತ್ತಾರೆ ಎನ್ನುವುದು ಸರಿ .

6. ಆರೋಪಿತರನ್ನು ದಸ್ತಗಿರಿ ಮಾಡಿದ ನಂತರ, ಸದರಿ ವಿಷಯವನ್ನು ಆರೋಪಿಗಳಿಗೆ ಸಂಬಂಧಿಸಿದ ಶೈಶಿತ್ ಖಾನ್, ಬಿನ್ , ಲೇಃ ರಶೀದ್ ಖಾನ್ ಎನ್ನುವವರಿಗೆ

ವಿಷಯವನ್ನು ತಿಳಿಸಲಾಯಿತು. ಆತ ಆರೋಪಿಗಳ ಸಂಬಂಧಿಕ. ಆದರೆ ಹೇಗೆ ಸಂಬಂಧಿಕ ಎನ್ನುವುದು ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**